**ಪಿಡಬ್ಲ್ಯು. 1**

**ಸಾಕ್ಷಿಯನ್ನು ದಿಃ 24.10.2017 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.**
**ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ ಕೆ ಎಸ್ ವಕೀಲರಿಂದ ಃ**

ನಾನು ನ್ಯಾಯಾಲಯದಲ್ಲಿ ಜವಾನನಾಗಿ ನಿವೃತ್ತಿ ಹೊಂದಿರುತ್ತೇನೆ ಎಂದರೆ ಸರಿ. 1ನೇ ಪ್ರತಿವಾದಿಯು ನ್ಯಾಯಾಲಯದಲ್ಲಿ ಯಾವ ದಾಖಲೆಗಳನ್ನು ಹಾಕಿರುತ್ತಾರೆಂದು ನನಗೆ ಗೊತ್ತಿಲ್ಲ. ಪ್ರತಿವಾದಿಯರು ಈ ಪ್ರಕರಣದಲ್ಲಿ ಯಾವ ತಕರಾರು ಹಾಕಿರುತ್ತಾರೆಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಮೂಲತಃ ಪಾಪಣ್ಣ ಎಂಬುವವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿ. ನನ್ನನ್ನು ಪಾಪಣ್ಣನವರು ಯಾವ ವಯಸ್ಸಿನಲ್ಲಿ ಮತ್ತು ದಿನಾಂಕದಂದು ದತ್ತು ತೆಗೆದುಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ. ದತ್ತಕ ಪತ್ರವೂ ನೊಂದಣಾಧಿಕಾರಿಯವರ ಕಛೇರಿಯಲ್ಲಿ ನೊಂದಣಿ ಆಗಿರುವುದಿಲ್ಲ. ನಾನು ಪಾಪಣ್ಣನವರು ದತ್ತು ಪುತ್ರ ಎಂದು ನನ್ನ ಶಾಲಾ ದಾಖಲೆಗಳಲ್ಲಿ ತೋರಿಸಿರುತ್ತೇನೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ಸಾಕ್ಷಿಗೆ ಸದರಿ ಪಾಪಣ್ಣನವರ ಸಹಿಯನ್ನು ನೋಡಿದರೆ ಗುರುತಿಸುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಗುರುತಿಸುತ್ತೇನೆಂದು ನುಡಿದಿದ್ದರ ಮೇರೆಗೆ ಸಾಕ್ಷಿಗೆ 1 ದಾಖಲೆಯ ಜೆರಾಕ್ಸ್ ಕಾಪಿಯನ್ನು ತೋರಿಸಿ, ಅದರ ಮೇಲೆ ಇರುವ ಸಹಿ ಪಾಪಣ್ಣನವರದು ಅಲ್ಲವೇ ಎಂದು ಪ್ರಶ್ನಿಸಿದಾಗ ಸಾಕ್ಷಿಯು ಸದರಿ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ ಡಿ 1 ಎಂದು ಹಾಗೂ ಅದರ ಮೇಲೆ ಇರುವ ಪಾಪಣ್ಣನವರ ಸಹಿಯನ್ನು ನಿ ಡಿ 1(ಎ) ಎಂದು ಗುರುತಿಸಲಾಯಿತು. ಈ ಸಮಯದಲ್ಲಿ ಸಾಕ್ಷಿಯು ಮುಂದುವರೆದು ಸದರಿ ಸಹಿ ಪಾಪಣ್ಣನವರದು ಅಲ್ಲ ಎಂದು ತಿಳಿಸಿರುತ್ತಾರೆ.

ಸಾಕ್ಷಿಗೆ ಈಗ ಒಂದು ದೃಡೀಕೃತ ಪ್ರತಿಯನ್ನು ತೋರಿಸಿ, ಸದರಿ ದಾಖಲೆಯು ನಿ ಡಿ 1 ಕ್ಕೆ ತಾಳೆ ಹೊಂದುತ್ತದೇ ಅಲ್ಲವೇ ಎಂದರೆ ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಪರಿಶೀಲನೆ ಮಾಡಿ ಸರಿ ಹೊಂದುತ್ತದೆ ಎಂದು ನುಡಿದಿರುತ್ತಾರೆ. ಆದ ಕಾರಣ ಸದರಿ ದಾಖಲೆಯನ್ನು ನಿ ಡಿ 2 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಸದರಿ ದಾಖಲೆಯನ್ನು ಪ್ರತಿವಾದಿಯೇ ಸೃಷ್ಟಿಮಾಡಿರುತ್ತಾರೆಂದು ನುಡಿದಿರುತ್ತಾರೆ.

ಪಾಪಣ್ಣನವರು ದಿಃ3.9.1993 ರಂದು ಮರಣ ಹೊಂದಿರುತ್ತಾರೆ ಎಂದರೆ ಸರಿ. ಸದರಿ ಪಾಪಣ್ಣನವರ ಮರಣ ಪ್ರಮಾಣ ಪತ್ರವನ್ನು ಸಾಕ್ಷಿಗೆ ತೋರಿಸಿ, ಕೇಳಲಾಗಿ ಸಾಕ್ಷಿಯು ದಾಖಲೆಯನ್ನು ನೋಡಿ ಗುರುತಿಸಿದ್ದರ ಮೇರೆಗೆ ಸದರಿ ದಾಖಲೆಯನ್ನು ನಿ ಡಿ 3 ಎಂದು ಗುರುತಿಸಲಾಯಿತು.

ನಿ ಪಿ 11 ರಲ್ಲಿ ಕಾಣಿಸಿದ ನಮೂದನೆಯು 1ನೇ ಪ್ರತಿವಾದಿ ಹೆಸರಿಗೆ ದಾವಾಸ್ತಿ ವಿಲ್ ಪ್ರಕಾರ ಬಂದಿರುತ್ತದೆ ಎಂದು ನಮೂದನೆ ಇರುತ್ತದೆ ಎಂದರೆ ಸಾಕ್ಷಿಯು ಸದರಿ ದಾಖಲೆಯು ಬೋಗಸ್ ಇರುತ್ತದೆ ಎಂದು ನುಡಿದಿರುತ್ತಾರೆ.

ನಿ ಪಿ 7 ಮತ್ತು 8 ರಲ್ಲಿ 1991-92 ರಿಂದ 1997-98ನೇ ಸಾಲಿನಲ್ಲಿ 1ನೇ ಪ್ರತಿವಾದಿ ಹೆಸರು ನಮೂದನೆ ಇದ್ದು, ಸದರಿ ನಮೂದನೆಯು ಎಂ. ಟಿ 13/1993-94ರ ಪ್ರಕಾರ ಇರುತ್ತದೆ ಎಂದರೆ ಸಾಕ್ಷಿಯು ಎಲ್ಲಾ ಬೋಗಸ್ ಇರುತ್ತದೆ ಎಂದು ನುಡಿದಿರುತ್ತಾರೆ. ಸದರಿ ದಾಖಲೆಯ ಬಗ್ಗೆ ದೃಡೀಕೃತ ನಕಲನ್ನು ಸಂಬಂದಪಟ್ಟ ಇಲಾಖೆಯಲ್ಲಿ ಪಡೆದುಕೊಂಡಿರುತ್ತೇನೆ(ನಿ ಡಿ 1). ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಕಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನೊಂದಣಿ ಆಗಿರುವುದಿಲ್ಲ ಎಂದು ಹಿಂಬರಹಕೊಟ್ಟಿರುತ್ತಾರೆಂದು ನುಡಿದಿರುತ್ತಾರೆ. ನಿ ಡಿ 1 ರಲ್ಲಿ ಯಾರ್‍ಯಾರು ಸಾಕ್ಷಿ ಹಾಕಿದ್ದಾರೆ ಎಂದು ತೋರಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಯಾರು ಸಾಕ್ಷಿ ಹಾಕಿರುವುದಿಲ್ಲ ಅದು ಬೋಗಸ್ ಎಂದು ನುಡಿದಿರುತ್ತಾರೆ.

ನಾನು ಪಾಪಣ್ಣನವರ ದತ್ತು ಮಗ ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸದೇ ಇದ್ದರೂ ಸಹ ಹಾಜರುಪಡಿಸಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ, ಪ್ರತಿವಾದಿಯರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಎ.ಸಿ. ದಯಾನಂದ ಮೂರ್ತಿ)**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,

ಬಂಗಾರಪೇಟೆ.